ಅ) ರೋಣ ನಗರದಲ್ಲಿ ತಾಲ್ಲೂಕು ಪಂಚಾಯಿತಿ ಸಮಿತಿ ಸ್ವಾಮ್ಯದಲ್ಲಿರುವ ಸುಮಾರು 4 ಎಕರೆ ಸ್ಥಳವನ್ನು ತಾಲ್ಲೂಕು ಮಟ್ಟದ ಕ್ರೀಡಾಂಗಣವನ್ನಾಗಿ ಅಭಿವೃದ್ಧಿಪಡಿಸಲು ಸ್ಥಳ ಕಾಯ್ದಿರುಸಲಾಗಿದ್ದು ಈ ಕ್ರೀಡಾಂಗಣವನ್ನು ಅಭಿವೃದ್ಧಿ ಪಡಿಸುವ ಆಲೋಚನೆ ಸರ್ಕಾರದವರಿಗೆ ಇದೆಯೇ?

ಆ) ಹಾಗಿದ್ದಲ್ಲಿ ಈ ವರ್ಷ ಕೊಡತಕ್ಕಂತ ಅನುದಾನ ಎಷ್ಟು?

ಇ) ಗ್ರಾಮೀಣ ಪ್ರದೇಶದಲ್ಲಿನ ಕ್ರೀಡಾ ಪ್ರತಿಭೆಯನ್ನು ಗುರುತಿಸಲು ಮತ್ತು ಅವುಗಳಿಗೆ ತರಬೇತಿ ನೀಡುವುದಕ್ಕೆ ಸರ್ಕಾರದವರ ಯೋಜನೆಗಳು ಯಾವುದು?

ಈ) ಯುವಕರ ಚಟುವಟಿಕೆಗಳನ್ನು ಬಲಗೊಳಿಸುವ ನಿಟ್ಟಿನಲ್ಲಿ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಅಜಯಕುಮಾರ್ ಸರ್. ನಾಯಕ್ (ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು) :

ಅ) ರೋಣ ನಗರದಲ್ಲಿ ಕ್ರೀಡಾಂಗಣ ಕಟ್ಟುವ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ.

ಆ) ಉದ್ಭವಿಸುವುದಿಲ್ಲ

ಇ) ಗ್ರಾಮೀಣ ಪ್ರದೇಶದಲ್ಲಿನ ಕ್ರೀಡಾ ಪ್ರತಿಭೆಯನ್ನು ಗುರುತಿಸಿ ತರಬೇತಿ ನೀಡಲು ಇಲಾಖೆಯು ಕ್ರೀಡಾ ಶಾಲೆ ಹಾಗೂ ಕ್ರೀಡ್ ನಿಲಯಗಳನ್ನು 1981-82ನೇ ಸಾಲಿನಿಂದ ಕಾರ್ಯಗತ ಗೊಳಿಸುತ್ತಿದೆ: ಹಾಗೂ 16 ವರ್ಷದೊಳಗಿನ ಕ್ರೀಡಾಪಟುಗಳಿಗೆ ಗ್ರಾಮೀಣ ಕ್ರೀಡಾಕೂಟವನ್ನು ತಾಲ್ಲೂಕು ಮಟ್ಟದಿಂದ ರಾಜ್ಯ ಮಟ್ಟದವರೆಗೂ ನಡೆಸುತ್ತಿದೆ.

ಈ) ಇಲಾಖೆಯು ರಾಜ್ಯದಲ್ಲಿ ಯುವ ಚಟುವಟಿಕೆಗಳನ್ನು ಬಲಗೊಳಿಸುವ ನಿಟ್ಟಿನಲ್ಲಿ ವಿವಿಧ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿವೆ. ಅವುಗಳಲ್ಲಿ ಮುಖ್ಯವಾಗಿ ಯುವಕ ಸಂಘಗಳ ಸಂಘಟನೆ, ಯುವ ಮುಂದಾಳತ್ವ, ಯುವ ಚೇತನ ತರಬೇತಿ ಶಿಬಿರ, ಕರ್ನಾಟಕ ಯುವಜನ ಸ್ವಯಂ ಸೇವಾದಳ, ಯುವಜನ ಮೇಳ ಮತ್ತು ರ್ಯಾಲಿಗಳು, ಯುವ ಪ್ರಶಸ್ತಿ ಸಾಹಸ ಕ್ರೀಡೆಗಳು ಇಲಾಖೆಯ ವತಿಯಿಂದ ನಡೆಸಲಾಗುವ ಸ್ವಯಂ ಸಂಸ್ಥೆಗಳು ಮುಂತಾದವು.

ರೋಣ ತಾಲ್ಲೂಕಿನಲ್ಲಿರುವ ಅರಣ್ಯ ಇಲಾಖೆ ಕುರಿತು

681 - ಶ್ರೀ ಶೈಲಪ್ಪ ಬಿದರೂರು (ರೋಣ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೋಣ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆ ಸ್ವಾಮ್ಯಕ್ಕೆ ಒಳಪಟ್ಟಂತೆ ಇರುವ ಒಟ್ಟು ಕ್ಷೇತ್ರ ಎಷ್ಟು

ಆ) ಇರತಕ್ಕಂತಹ ಕ್ಷೇತ್ರವನ್ನು ಅಭಿವೃದ್ಧಿ ಪಡುಸಲು ವಿಶೇಷ ಯೋಜನೆ ಹಾಕಿದೆಯೇ?

ಇ) ಕಳೆದ ನಾಲ್ಕು ವರ್ಷಗಳಿಂದ ಕ್ಷೇತ್ರವನ್ನು ಅಭಿವೃದ್ಧಿಪಜಡಿಸಲು ವಿನಿಯೋಗಿಸಿದ ಹಣವೆಷ್ಟು? (ಸಂಪೂರ್ಣ ವಿವರಗಳೊಂದಿಗೆ ತಿಳಿಸುವುದು)

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) 276.5 ಹೆಕ್ಟೇರುಗಳು

ಆ) ಅಭಿವೃದ್ಧಿ ಕೆಲಸಗಳನ್ನು ಕೆಲವು ಯೋಜನೆಗಳಡಿಯಲ್ಲಿ ಕೈಗೊಳ್ಳಲಾಗುತ್ತಿದೆ.

ಇ) ಖರ್ಚು ಮಾಡಿದ ಹಣದ ವಿವರ ಈ ಕೆಳಕಂಡಂತಿರುತ್ತದೆ

	ವರ್ಷ	ರೂ. ಲಕ್ಷಗಳಲ್ಲಿ
1.	1991-92	1.020
2.	1992-93	4.430
3.	1993-94	5.710
4.	1994-95	7.347

ಉತ್ತರ ಪತ್ರಿಕೆಗಳ ಮೌಲ್ಯ ಮಾಪನದ ಬಗ್ಗೆ

599 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪದವಿ ಪೂರ್ವ ಶಿಕ್ಷಣ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕಾಗಿ ಉಪಮುಖ್ಯ ಪರಿವೀಕ್ಷಕರ ಮತ್ತು ಸಹಾಯಕ ಪರಿವೀಕ್ಷಕರ ನೇಮಕಾತಿ ಆದೇಶಗಳನ್ನು ಒಂದು ವಾರ ಮುಂಚಿತರಾಗಿ ಮಾತ್ರ ಕಳುಹಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷಕರು ಬಾರದಿದ್ದಲ್ಲಿ ಕ್ಯಾಂಪಿನ ಅವಧಿಯನ್ನು ವಿಸ್ತರಿಸದೇ ಮೌಲ್ಯ ಮಾಪನ ಕಾರ್ಯವನ್ನು ಪೂರ್ತಿಗೊಳಿಸಲು ಸರ್ಕಾರದವರು ಯಾವ ಕ್ರಮಗಳನ್ನು ಕೈಗೊಂಡಿದ್ದಾರೆ.

ಇ) ಶಿಕ್ಷಕ ವರ್ಗದ ಒಂದು ಗುಂಪಿನವರು ಸತ್ಯಾಗ್ರಹದಲ್ಲಿ ನಿರತರಾದರೆ ಮೌಲ್ಯಮಾಪನ ಕಾರ್ಯದಲ್ಲಾಗುವ ವಿಳಂಬವನ್ನು ತಪ್ಪಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಈ) ಪದವಿ ಮಹಾವಿದ್ಯಾಲಯಗಳ ಶಿಕ್ಷಕರ 20 ಬೇಡಿಕೆಗಳು ಇನ್ನೂ ಇತ್ಯರ್ಥಗೊಳ್ಳದೆ ಬಾಕಿ ಇರುವ ಹಿನ್ನೆಲೆಯಲ್ಲಿ ಮೌಲ್ಯಮಾಪನ ಕಾರ್ಯ ಸುಗಮವಾಗಿ ಸಾಗುವುದೆಂಬ ಭರವಸೆ ಸರ್ಕಾರಕ್ಕಿದೆಯೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಸಾಮಾನ್ಯವಾಗಿ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯ ಪ್ರಾರಂಭವಾಗುವ 20 ದಿವಸಗಳ ಮುಂಚಿತವಾಗಿ ನೇಮಕಾತಿ ಆದೇಶಗಳನ್ನು ಕಳುಹಿಸಲಾಗುವುದು.

ಆ) ನಿಗದಿಪಡಿಸಿದ ಸಂಖ್ಯೆಯ ಮೌಲ್ಯಮಾಪಕರು ಬಾರದಿದ್ದಲ್ಲಿ ಕೆಲವು ಸಂದರ್ಭಗಳಲ್ಲಿ ಹೆಚ್ಚುವರಿ ಮೌಲ್ಯಮಾಪಕರನ್ನು ನೇಮಿಸಲಾಗುವುದು. ಕೆಲವು ಸಂದರ್ಭಗಳಲ್ಲಿ ಕ್ಯಾಂಪಿನ ಅವಧಿಯನ್ನು ವಿಸ್ತರಿಸಲಾಗುವುದು.

ಇ) ಒಂದು ಗುಂಪಿನ ಮೌಲ್ಯಮಾಪನ ಬೇಡಿಕೆಗಳು ಸಮಂಜಸವಾಗಿದ್ದಲ್ಲಿ ಬೇಡಿಕೆಗಳನ್ನು ಪರಿಶೀಲಿಸಿ ಅಗತ್ಯ ಕ್ರಮಕೈಗೊಂಡು ಮೌಲ್ಯಮಾಪನ ಕಾರ್ಯವನ್ನು ಮುಗಿಸಲಾಗುತ್ತಿದೆ. ಇಲ್ಲದಿದ್ದ ಪಕ್ಷದಲ್ಲಿ ಪ್ರಶ್ನೆ 'ಅ' ಗೆ ನೀಡಿರುವ ಉತ್ತರದಲ್ಲಿ ತಿಳಿಸಿರುವಂತೆ ಅದೇ ವಿಷಯದ ಅರ್ಹ ಉಪನ್ಯಾಸಕರನ್ನು ನೇಮಕ ಮಾಡಿಕೊಂಡು ಮೌಲ್ಯಮಾಪನ ಕಾರ್ಯವನ್ನು ಮುಗಿಸಲಾಗುವುದು.

ಈ) ಭರವಸೆ ಇದೆ.

ಪ್ರಾಥಮಿಕ ಶಾಲಾ ಗೌರವ ಶಿಕ್ಷಕರಾಗಿ ಸೇವೆಸಲ್ಲಿಸುತ್ತಿರುವವರ ಬಗ್ಗೆ

967 - ಶ್ರೀ ಜೆ.ಟಿ. ಪಟೀಲ್ (ಬೀಳಗಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?